**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 483/2025**

| | | | |
|---|---|---|---|
| ಹೆಸರು | | ಶ್ರೀ ನಾಗೇಂದ್ರ | ಚಾಸಾಃ 02 |
| ತಂದೆ ಹೆಸರು | | ಶ್ರೀ ರಾಮಚಂದ್ರಶೆಟ್ಟಿ | ಪ್ರಾಸಾಃ 02 |
| ವಯಸ್ಸು | | 65 ವರ್ಷ | ಸಾಕ್ಷಿಯನ್ನು ದಿನಾಂಕಃ 20.12.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವಾಚ್ ಮೇನ್ | |
| ವಾಸ | | ಬೇಗೂರು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಚಾಸಾ–1 ರವರು ನನಗೆ ಗೊತ್ತು. ನಾನು ಚಾಸಾ–1 ರವರ ಬಳಿ ವಾಚ್ ಮೇನ್ ಕೆಲಸ ಮಾಡುತ್ತೇನೆ. ದಿಃ 27.05.2025 ರಂದು ಸಂಜೆಃ 7.00 ಗಂಟೆ ಸಮಯದಲ್ಲಿ ಆರೋಪಿಗಳು ಬಂದು ನನ್ನ ಮಲಗುವ ಮಂಚವನ್ನು ಹೋರಗೆ ಹಾಕಿದರು. ಅಲ್ಲಿಗೆ ಬಂದ ಹೆಂಗಸರು ಕೂಗಾಡಿದರು ನಾನು ಹೊರಗಡೆ ಬಂದೆ. ಚಾಸಾ–3 ರವರಿಗೆ ವಿಷಯ ತಿಳಿಸಿದೆ. ಚಾಸಾ–3 ರವರು ಜಗಳ ಬಿಡಿಸಿದರು. ದಿಃ 28.05.2025 ರಂದು ಚಾಸಾ–1 ರವರಿಗೆ ವಿಷಯ ತಿಳಿಸಿದೆ. ಪೊಲೀಸ ಹೇಳಿಕೆ ನೀಡಿದ್ದೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ 1, 2, 4 ಮತ್ತು 5 ರವರು ಗೈರು ಹಾಜರಿದ್ದು ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ. ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ಸದರಿ ದಿನಾಂಕದಂದು ಆರೋಪಿ 1 ರಿಂದ 7 ರವರು ಗುಂಪುಕಟ್ಟಿಕೊಂಡು ಬಂದು ಏಕಾಏಕೀ ಬಂದದು ನಾನು ಕಾಯುತ್ತಿದ್ದ ಮನೆಯ ಒಳಗಡೆ ಪ್ರವೇಶ ಮಾಡಿದರು ಎಂದರೆ ಸರಿ. ಬಾಗಿನ್ನು ತೆರೆದು ಒಳ ಪ್ರವೇಶ ಮಾಡಿದರು ಎಂದರೆ ಸರಿ. ಸರಿದ ವಿಷಯವನ್ನು ಚಾಸಾ–1 ರವರಿಗೆ

ಕರೆ ಮಾಡಿ ತಿಳಿಸಿದೆ ಎಂದರೆ ಸರಿ. ದಿಃ 28.05.2025 ರಂದು ಚಾಸಾ-1 ರವರು ಘಟನಾ ಸ್ಥಳಕ್ಕೆ ಬಂದು ನ್ಯಾಯಾಲಯದಲ್ಲಿ ದಾವೆ ಇದೆ ಏಕೆ ತೊಂದರೆ ಕೊಡುತ್ತೀರಾ ಎಂದು ಆರೋಪಿಗಳನ್ನು ಕೇಳಿದರು ಎಂದರೆ ಸರಿ. ಆಗ ಆರೋಪಿಗಳು ನಮ್ಮ ವಕೀಲರು ಅಪೀಲು ಸಲ್ಲಿಸಿರುತ್ತಾರೆ ಆ ಕಾರಣ ಕಟ್ಟಡ ಕಟ್ಟಲು ಬಿಡುವುದಿಲ್ಲ ಎಂದು ಅವಾಚ್ಯವಾಗಿ ಬೈದರು ಎಂದರೆ ಸರಿ. ಆರೋಪಿಗಳು ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. ಚಾಸಾ-3 ಮತ್ತು 4 ರವರು ಗಲಾಟೆ ಬಿಡಿಸಿದರು ಎಂದರೆ ಸರಿ. ಸದರಿ ವಿಷಯವಾಗಿ ಚಾಸಾ-1 ರವರು ದೂರು ನೀಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಚಾಸಾ-1 ರವರು ಬೇಗೂರಿನಲ್ಲಿ ಕ್ಲಿನಿಕ್ ತೆರೆದಿದ್ದಾರೆ ಎಂದರೆ ಸರಿ. ನಾನು ಅದನ್ನು ನೋಡಿಕೊಳ್ಳುತ್ತೇನೆ ಎಂದರೆ ಸರಿ. ಚಾಸಾ-1 ರವರು ದೂರು ನೀಡಿದ ಮೇಲೆ ಘಟನೆ ವಿಷಯವನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ನಾನು ಠಾಣೆ ಹೋಗಿಲ್ಲ ಎಂದರೆ ಸರಿ. ಚಾಸಾ-1 ರವರ ಕ್ಲಿನಿಕ್ ನಲ್ಲಿ ನಾನು ಕೆಲಸ ಮಾಡುತ್ತಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**